ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 2006–07ನೇ ಸಾಲಿನ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 35 ನೋಂದಾಯಿತ ಮೂರ್ತೆದಾರರ ಸೇವಾ ಸಹಕಾರ ಸಂಘಗಳಿಗೆ ಸೇಂದಿ ಶೇಕರಣ ಡಿಪೋ ಸನ್ನದು ಮಂಜೂರು ಮಾಡಿ, 881 ಮೂರ್ತೆದಾರರ ಹೆಸರುಗಳನ್ನು ನೋಂದಾಯಿಸಿಕೊಳ್ಳಲಾಗಿದೆ ಇವರನ್ನು ಹೊರತುಪಡಿಸಿ ಇತರೆ ಕುಟುಂಬಗಳು ಮೂರ್ತೆದಾರಿಕೆಯಲ್ಲಿ ಜೀವನೋಪಾಯವನ್ನಾಗಿ ತೊಡಗಿಸಿಕೊಂಡಿರುವ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ

ಆ) ಮತ್ತು ಇ) 1990ರ ಪೂರ್ವದಲ್ಲಿ ಸೇಂದಿ ಮಾರಾಟವನ್ನು ರಾಜ್ಯದಾದ್ಯಂತ ಸಂಪೂರ್ಣವಾಗಿ ನಿಷೇಧ ಮಾಡಲಾಗಿತ್ತು ತದನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಲ್ಲಿಯ ಮೂರ್ತೆದಾರರುಗಳ ಜೀವನೋಪಾಯಕ್ಕೆ ಮಾರ್ಗವಾಗಿ ಮತ್ತು ಈ ಜಿಲ್ಲೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸೇಂದಿ ಮರಗಳು ಇದ್ದುದನ್ನು ಗಮನದಲ್ಲಿಟ್ಟುಕೊಂಡು ಸೇಂದಿ ಮಾರಾಟವನ್ನು ಮುಂದುವರಿಸಲಾಗಿದೆ 2006–07ನೇ ಸಾಲಿನಲ್ಲಿ ಈ ಜಿಲ್ಲೆಯಲ್ಲಿ 35 ನೋಂದಾಯಿತ ಮೂರ್ತೆದಾರರ ಸೇವಾ ಸಹಕಾರಿ ಸಂಘಗಳಿಗೆ ಸೇಂದಿ ಶೇಕರಣಾ ಡಿಪೋ ಸನ್ನದು ಮಂಜೂರು ಮಾಡಲಾಗಿದೆ

ಈ) ಸರ್ಕಾರವು ಸಾರಾಯಿ ಸೇವಿಸುವವರ ಆರ್ಥಿಕ ಸ್ಥಿತಿ ಮತ್ತು ಅವರ ಸಾಮಾಜಿಕ ಸ್ಥಿತಿಯನ್ನು ಮನಗಂಡು ಸಾರಾಯಿ ಮಾರಾಟವನ್ನು ಮಾತ್ರ ರದ್ದುಗೊಳಿಸಲು ಗಂಭೀರ ಚಿಂತನೆ ನಡೆಸಿದೆ

790 (998) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿರುವ ಪ್ರಕರಣಗಳೆಷ್ಟು ,

ಆ) ಹೊಗರೇಖಾನ್ ಗಿರಿ ಗಣಿಗಾರಿಕೆಗೆ ಸಂಬಂಧಿಸಿದಂತೆ ಸರ್ಕಾರದ ಸ್ಪಷ್ಟ ನಿಲುವೇನು ,

ಇ) ಹೊಗರೇಖಾನ್ ಗಿರಿ ಪಶ್ಚಿಮಘಟ್ಟ ಸಂರಕ್ಷಣಾ ವ್ಯಾಪ್ತಿಗೆ ಒಳಪಡುವುದೆ,

ಈ) ಹೊಗರೇಖಾನ್ ಗಿರಿ ಪ್ರದೇಶವನ್ನು ವೈವಿಧ್ಯತಾ ಸಂರಕ್ಷಿತ ಪ್ರದೇಶವೆಂದು ಘೋಷಿಸಲು ಸರ್ಕಾರ ಯೋಚಿಸಿದೆಯೇ ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆಗೆ ಯಾವುದೇ ಅನುಮತಿಯನ್ನು ನೀಡಿರುವುದಿಲ್ಲ

ಆ) ಹೊಗರೇಖಾನ್ ಗಿರಿ ಗಣಿಗಾರಿಕೆಗೆ ಸಂಬಂಧಿಸಿದಂತೆ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಇಲ್ಲ.

ಈ) ಇಲ್ಲ

791 (999) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಕ್ಕೆ ಅಬಕಾರಿ ಇಲಾಖೆಯ ಸಾರಾಯಿ ಮೂಲದಿಂದ ಬರುತ್ತಿರುವ ಆದಾಯ ಎಷ್ಟು ,

ಆ) ಇಷ್ಟೊಂದು ಆದಾಯ ತರುತ್ತಿರುವ ಸಾರಾಯಿ ಮಾರಾಟಕ್ಕೆ ನಿಷೇಧವನ್ನು ತರುವ ಉದ್ದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಈ ಸಾರಾಯಿ ನಿಷೇಧದಿಂದ ಸರ್ಕಾರದ ಆರ್ಥಿಕ ಸ್ಥಿತಿಯ ಮೇಲಾಗುವ ದುಷ್ಪರಿಣಾಮ ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಈ ಆರ್ಥಿಕ ಕೊರತೆಯನ್ನು ಸರಿದೂಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಕಳೆದ ಮೂರು ವರ್ಷಗಳಲ್ಲಿ ಸಾರಾಯಿ ಮೂಲದಿಂದ ಬಂದ ಆದಾಯದ ವಿವರ ಈ ಕೆಳಗಿನಂತಿದೆ

ವರ್ಷ	ಸಾರಾಯಿ ಮೂಲಗಳಿಂದ ಬಂದ ಒಟ್ಟು ಆದಾಯ (ರೂ ಕೋಟಿಗಳಲ್ಲಿ)
2003–04	1037 38
2004–05	1257 56
2005–06	1565 43

2006–07ನೇ ಆರ್ಥಿಕ ವರ್ಷಕ್ಕೆ ಸಾರಾಯಿ ಮೂಲದಿಂದ 1906 28 ಕೋಟಿ ರೂಪಾಯಿಗಳ ಆದಾಯವು ಬರುವ ನಿರೀಕ್ಷೆ ಇದ್ದು ಡಿಸೆಂಬರ್ 2006ರ ಅಂತ್ಯಕ್ಕೆ ಸರ್ಕಾರಕ್ಕೆ 1267 98 ಕೋಟಿ ರೂ ಗಳ ಆದಾಯ ಸಂಗ್ರಹವಾಗಿರುತ್ತದೆ

ಆ), ಇ) ಮತ್ತು ಈ) ಸಾರಾಯಿಯನ್ನು ರದ್ದುಪಡಿಸುವ ಪ್ರಕ್ರಿಯೆಯ ಬಗ್ಗೆ ಸರ್ಕಾರವು ಗಂಭೀರ ಚಿಂತನೆ ನಡೆಸಿದೆ ಸರ್ಕಾರದ ಮೇಲೆ ಇದರಿಂದಾಗುವ ಸಾಮಾಜಿಕ ಪರಿಣಾಮ ಮತ್ತು ಆರ್ಥಿಕ ಪರಿಣಾಮಗಳಂತಹ ಸಮಸ್ಯೆಗಳನ್ನು ಪರಿಗಣಿಸಿ, ಅಂತಿಮ ತೀರ್ಮಾನ ಕೈಗೊಳ್ಳಬೇಕಾಗಿದೆ ಸಾರಾಯಿ ರದ್ದುಗೊಳಿಸುವುದರಿಂದ ಸಮಾಜದ ಮೇಲೆ ಆಗುವ ಸಾಮಾಜಿಕ ಪರಿಣಾಮ ಮತ್ತು ಸರ್ಕಾರದ ಮೇಲೆ ಆಗುವ ಆರ್ಥಿಕ ಸ್ಥಿತಿಗತಿಗಳ ಪರಿಣಾಮದ ಹಾಗೂ ಇತರೆ ತತ್ಸಂಬಂಧ ಪರಿಣಾಮಗಳ ಬಗ್ಗೆ ವಿವಿಧ ಹಂತಗಳಲ್ಲಿ ಮೌಲ್ಯ ಮಾಪನಗಳನ್ನು ನಡೆಸಿ ನಂತರ ಅಂತಿಮ ತೀರ್ಮಾನಕ್ಕೆ ಬರಲಾಗುವುದು